O.S. ನಂಬರಃ 45/2017

ಪಿ. ಡಬ್ಲ್ಯೂಃ 2

ದಿಃ 29-02-2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟಿ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಎಸ್.ಯು.ಎ. ವಕೀಲರಿಂದಃ</u>

ವಾದಿಯರು ನನ್ನ ಆತ್ಮೀಯರು ಎಂದರೆ ಸರಿ. ನನ್ನ ತಾಯಿ ಹೆಸರು ಗುಲಾಬಿ ಮಾಣಿ ಗುನಗಾ ಇದೆ. ನಾವು 4-ಜನ ಗಂಡು ಮಕ್ಕಳು. ನನ್ನ ತಮ್ಮ ವಿಷ ಸೇವಿಸಿ ಮೃತಪಟ್ಟಿದ್ದಾನೆ. ಪೊಲೀಸರು ನನ್ನ ಮೇಲೆ ಅನುಮಾನ ಮಾಡಿ, ಬಹಳಷ್ಟು ಸಾರಿ ಕರೆಸಿದ್ದರು ಎಂದರೆ ಸರಿಯಲ್ಲ. ಪೊಲೀಸರು ನನ್ನನ್ನು ಯಾವತ್ತೂ ಕರೆದಿಲ್ಲ.

ನನ್ನ ತಂದೆಯಿಂದ 1-ಎಕರೆ ಜಮೀನು ಬಂದಿದೆ. ಸಾಕ್ಷಿ ಹೇಳಲು 3 ನೇ ಪ್ರತಿವಾದಿ ಕರೆದಿರುತ್ತಾರೆ. ದಾವಾ ಆಸ್ತಿಯಲ್ಲಿ ಯಾರು ಸಾಗುವಳಿ ಮಾಡುತ್ತಾರೆ ಮತ್ತು ಯಾವ ರೀತಿ ಸಾಗುವಳಿ ಮಾಡುತ್ತಾರೆ ಎಂದು ನೋಡಿದೇನೆ. ಈ ವರ್ಷ ಜಯಾ ಕಂಪನಿಯ ಭತ್ತ ಹಾಕಿರುತ್ತಾರೆ. ಬೀಜದ ಭತ್ತ ಖರೀದಿಸಿದ ಬಗ್ಗೆ ರಶೀದಿಯನ್ನು ವಾದಿಯರು ತೋರಿಸಿಲ್ಲ. ಆಸ್ತಿಯ ಸರ್ವೇ ನಂಬರ ಗೊತ್ತಿಲ್ಲ. ನನ್ನ ಮನೆ ಸರ್ವೇ ನಂ. 49 ರಲ್ಲಿ ಇರಬಹುದು, ಖಚಿತವಾಗಿ ಗೊತ್ತಿಲ್ಲ. ವಾದಿಯರ ಜಮೀನಿನ ರೈತಾಪಿ ಕೆಲಸದ ಸಹಾಯ ಹೊರತುಪಡಿಸಿ ಬೇರೆ ಯಾರಿಗೂ ರೈತಾಪಿ ಕೆಲಸದಲ್ಲಿ ಸಹಾಯ ಮಾಡಲು ಹೋಗಿಲ್ಲ. ಈ ದಿನ ನಾನು ಹಾಗೂ ಇನ್ನೊಬ್ಬ ಸಾಕ್ಷಿದಾರ ಒಂದೇ ಬೈಕಿನಲ್ಲಿ

ಬಂದಿರುತ್ತೇವೆ ಎಂದರೆ ಸರಿ. ನಾನು ಹಾಗೂ ಇನ್ನೊಬ್ಬ ಸಾಕ್ಷಿದಾರ ಜಮೀನು ವ್ಯಾಪಾರದ ಕೆಲಸ ಮಾಡುತ್ತೇವೆ ಎಂದರೆ ಸರಿಯಲ್ಲ.

ನನ್ನ ತಾಯಿ ನಮಗೆಲ್ಲ ಹೆದರಿ ಎಲ್ಲಿ ಕೆಲಸಕ್ಕೆ ಹೋಗಿರುತ್ತಾಳೋ ಅಲ್ಲಿಯೇ ವಾಸವಿದ್ದಾಳೆ ಎಂದರೆ ಸರಿಯಲ್ಲ. ದಾವಾ ಆಸ್ತಿ ಪ್ರತಿವಾದಿಯರ ಕಬ್ಜಾ ವಹಿವಾಟಿಯಲ್ಲಿದ್ದರೂ ಸಹ ವಾದಿಯರ ಕಬ್ಜಾ ವಹಿವಾಟಿಯಲ್ಲಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರ ಕಬ್ಜೆ ಹೇಗಾದರೂ ಮಾಡಿ ತಪ್ಪಿಸಿ, ಅದನ್ನು 3 ನೇ ವ್ಯಕ್ತಿಗೆ ವ್ಯವಹಾರ ಮಾಡಿಸಲು ಯೋಜನೆ ರೂಪಿಸಿರುತ್ತೇನೆ ಎಂದರೆ ಸರಿಯಲ್ಲ.

(2 ನೇ ಪ್ರತಿವಾದಿ ಪರ ವಕೀಲರು, 1 ನೇ ಪ್ರತಿವಾದಿ ಪರ ಮಾಡಿದ ಪಾಟಿ ಸವಾಲನ್ನು ಅಳವಡಿಸಿಕೊಳ್ಳಲು ವಿನಂತಿಸಿದ್ದು, ಅನುಮತಿಸಲಾಯಿತು.)

<u>ಮರು ವಿಚಾರಣೆಃ</u> ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು, ಅಂಕೋಲಾ.